JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ವೀರಮಾತೆ ಕಿತ್ತೂರು ರಾಣಿ ಚೆನ್ನಮ್ಮ

**ಡಾ. ತಿಪ್ಪೇಸ್ವಾಮಿ ಡಿ.ಎಸ್. ಸಹಾಯಕ ಪ್ರಾಧ್ಯಾಪಕರು,**
**ವಿ.ಎಂ.ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ**
**ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ.**

ಪ್ರಸ್ತಾವನೆ :

ಕರ್ನಾಟಕ ಇತಿಹಾಸದಲ್ಲಿ ತಾಯ್ನಾಡಿನ ರಕ್ಷಣೆಗಾಗಿ ಸ್ವತಃ ರಣರಂಗಕ್ಕಿಳಿದು ಯುದ್ಧ ಮಾಡಿದ ಮಹಿಳಾಮಣಿಗಳು ಅತ್ಯಂತ ವಿರಳ. ವೀರರಾಣಿ ಕಿತ್ತೂರು ಚೆನ್ನಮ್ಮ, ಚಿತ್ರದುರ್ಗದ ಒನಕೆ ಓಬವ್ವ , ಬೆಳವಡಿ ಮಲ್ಲಮ್ಮ, ಕೆಳದಿ ಚೆನ್ನಮ್ಮ ಹೀಗೆ ಸ್ತ್ರೀರತ್ನಗಳನ್ನು ಹೆಮ್ಮೆಯಿಂದ ಉಲ್ಲೇಖಿಸಬಹುದಾಗಿದೆ. 1824ರ ಅಕ್ಟೋಬರ್ 23 ರಂದು ಕಿತ್ತೂರು ಸಂಸ್ಥಾನದ ರಾಣಿ ಚೆನ್ನಮ್ಮ ತನ್ನ ಸಾಮ್ರಾಜ್ಯ ಸ್ವಾತಂತ್ರ್ಯ ರಕ್ಷಣೆಗಾಗಿ ಪ್ರಬಲ ಬ್ರಿಟೀಷರ ವಿರುದ್ಧ ಯುದ್ಧ ಮಾಡಿದ್ದಷ್ಟೇ ಅಲ್ಲ. ಜಯವನ್ನೂ ಸಾಧಿಸಿದ್ದು ನಮಗೆ ರೋಮಾಂಚನ ಉಂಟು ಮಾಡುವ ಸಂಗತಿಯಾಗಿದೆ. ಈ ಹೊತ್ತಿನಲ್ಲಿ ರಾಣಿ ಚೆನ್ನಮ್ಮನ ಮಾತೃಭೂಮಿ ರಕ್ಷಣೆಯ ಹೋರಾಟದ ಕೆಲವು ಕ್ಷಣಗಳನ್ನು ಜನಪದ ಹಾಡುಗಳಲ್ಲಿ ಸ್ಮರಿಸಿ ಕೊಳ್ಳೋಣ.

ಕಿತ್ತೂರು ಸಂಸ್ಥಾನ ಚಿಕ್ಕದಾದರೂ ಅದು ಬ್ರಿಟಿಷ ಸಾಮ್ರಾಜ್ಯಕ್ಕೆ ತೋರಿದ ಪ್ರತಿಭಟನೆ ದೊಡ್ಡದು ಅಲ್ಲಿನ ಶಿವಲಿಂಗರುದ್ರಸರ್ಜನು 1824ರಲ್ಲಿ ಕಾಲವಾಗಲು, ಅವನ ಮಲತಾಯಿ ಚನ್ನಮ್ಮ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಳ್ಳಲು ಯತ್ನಿಸಿದಳು. ಬ್ರಿಟಿಷರು ಇದನ್ನು ಒಪ್ಪದಿದ್ದಾಗ, ಕಿತ್ತೂರಿನ ರಾಣಿ ಚೆನ್ನಮ್ಮ ಮತ್ತು ಅಲ್ಲಿನ ಜನತೆ ಬ್ರಿಟಿಷರನ್ನು ಪ್ರತಿಭಟಿಸಿ ನಿಂತರು. ಧಾರವಾಡದಲ್ಲಿದ್ದ ಬ್ರಿಟಿಷ ಕಲೆಕ್ಟರ್ ಥ್ಯಾಕರೆ ಕಿತ್ತೂರನ್ನು ವಶಪಡಿಸಿ ಕೊಳ್ಳಲು ತಯಾರಿಯಾದನು. ಕಿತ್ತೂರಿನ ಅಧಿಕಾರಿಗಳಾದ ಮಲ್ಲಪ್ಪಶೆಟ್ಟಿ ವೆಂಕಟರಾವ್‌ರನ್ನು ಆಮಿಷ ತೋರಿ ತನ್ನೆಡೆಗೆ ಸೇಳೆದುಕೊಳ್ಳುವಲ್ಲಿ ಯಶಸ್ವಿಯೂ ಆದನು ನಂತರ ಕಿತ್ತೂರಿನ ಮೇಲೆ ಸೈನ್ಯ ನುಗ್ಗಿಸುವ ಯೋಜನೆ ಮಾಡಿದನು. ಆದರೂ ಚನ್ನಮ್ಮ ಅವಸರಪಡಲಿಲ್ಲ ಯುದ್ಧದ ಅನಾಹುತಗಳನ್ನು ನೆನೆದು ಮನನೊಂದಳು. ಹೇಗಾದರೂ ಮಾಡಿ ಪರಿಸ್ಥಿತಿಯನ್ನು ತಾಳ್ಮೆಯಿಂದ ಬಗೆಹರಿಸಿಕೊಳ್ಳಲು ನಿರ್ಧರಿಸಿ ಪತ್ರ ವ್ಯವಹಾರ ನಡೆಸಿದಳು. ಕೊನೆಗೆ ತನ್ನ ವಕೀಲರಾದ ಲಿಂಗಾಭಟ್ಟ ಮತ್ತು ರಾಚಪ್ಪ ಎಂಬುವರನ್ನು ಕಂಪನಿ ಸರ್ಕಾರಕ್ಕೆ ಕಳುಹಿಸಿಕೊಟ್ಟಳು. ಎಲ್ಲಿ ಪ್ರಯತ್ನಗಳು ವಿಫಲಗೊಂಡವು ಹಾಗಾಗಿ ಕ್ಲಿಷ್ಟ ಪರಿಸ್ಥಿತಿಯನ್ನು ಬೇಗ ಅರಿತ ಚನ್ನಮ್ಮ ಶ್ರೀಘ್ರದಲ್ಲೇ ಶತ್ರುವನ್ನು ಎದುರಿಸಳು ಸನ್ನದ್ಧಳಾದಳು. ಆ ಸ್ಥಾನ ಪ್ರಮುಖರು, ಸರದಾರರು ಮತ್ತು ಅಧಿಕಾರಿಗಳು ಸಭೆ ಕರೆದು ಪರಿತಸ್ಥಿತಿಯನ್ನು ಅರಿವು ಮಾಡಿಕೊಟ್ಟು ಕಿತ್ತೂರು ಸೇನೆ ಸಜ್ಜಾಗಲು ಆದೇಶವಿತ್ತಳ ಆಕೆಯ ದಿಟ್ಟತನ ಹಾಗೂ ಅಂದಿನ ಸಮಾವೇಶದಲ್ಲಿ ಆಡಿದ ಮಾತುಗಳು ಕಿತೂರಿನ

ದೇಶಾಭಿಮಾನಿಗಳಲ್ಲಿ ವಿದ್ಯುತ್ ಸಂಚರಿಸಿದಂತಾಗಿ ಪರಿಣಿಮಿಸಿದವು. ಇದರಿಂದ ಉತ್ಸೂಕರಾದ ಜನತೆ ಕೈಗೆ ಖಡ್ಗ ಎತ್ತಿಕೊಂಡು ಕಿತ್ತೂರು ಚಿರಾಯುವಾಗಲಿ' ರಾಣಿಚನ್ನಮ್ಮ ದೀರ್ಘ ಕಾಲ ಬಾಳಲಿ' ಎಂದು ಘೋಷಿಸಿದರು.

ಸುತ್ತಮುತ್ತ ಪಾಳೆ ಪಟ್ಟುಗಳಿಂದಲೂ ಸೈನ್ಯ ಜಮಾಯಿಸತೊಡಗಿ ಕೋಲ್ಲಾಪುರದ ಮಹಾರಾಜನ ನೆರವನ್ನು ಕೋರಲಾಯಿತು. 1824ರ ಅಕ್ಟೋಬರ ಇಪ್ಪತ್ತರಂದು ತನ್ನ ಸೈನ್ಯದೊಡನೆ ಕಿತ್ತೂರಿಗೆಬಂದಿಳಿದ ಥ್ಯಾಕರೆ ಮಾರನೆ ದಿನ ಯುದ್ಧ ಘೋಷಿಸಿದನು. ಖಡ್ಗ ಹಿಡಿದು ಕುದುರೆಯನ್ನೇರಿದ ಚನ್ನಮ್ಮ ಸೈನಿಕರಲ್ಲಿ ಸ್ಪೂರ್ತಿ ನೀಡಿ ಹುರಿದುಂಬಿಸಿದಳು. ಮಹಾಮಂತ್ರಿ ಸರದಾರ ಗುರುಸಿದ್ಧಪ್ಪನ ನೇತ್ರತ್ವದಲ್ಲಿ ಹೋರಾಡಿದ ಕಿತ್ತೂರು ಪಡೆ ಬ್ರಿಟಿಷ್ ಸೇನೆಯನ್ನು ಎದುರಿಸಿ ನಲವತ್ತು ಮಂದಿಯನ್ನು ಬಂಧಿಸಿತಂದಿತು. ಐದು ದಿನಗಳ ಅನಂತರ ಸಂಭವಿಸಿದ ಕದನದಲ್ಲೂ ಜಯ ಕಿತ್ತೂರಿನದೇ ಆಯಿತು. ಚನ್ನಮ್ಮನ ಮೈಗಾವಲಿನ ಭಂಟ ಅಮಟೂರ ಬಾಳುತ್ತ ಥ್ಯಾಕರೆಯನ್ನು ಗುಂಡಿಟ್ಟುಕೊಂದ ಪ್ರಾಣದ ಹಂಗುತೋರೆದು ಹೋರಾಡಿದ ಇತರ ಪ್ರಮುಖರಲ್ಲಿ ಸೇನಾನಿ ಅಪರಾಧಿ ವೀರಪ್ಪ ಒಬ್ಬ ದಿಕ್ಕೆಟ್ಟ ಬ್ರಿಟಿಷ್ ಸೈನ್ಯ ರನರಂಗದಿಂದ ಓಡತೊಡಗಿತು. ವಿಜಯದ ಉತ್ಸಾಹದಿಂದ ಮರಳಿದ ಕಿತ್ತೂರ ಜನತೆ 1824ರ ಅಕ್ಟೋಬರ 27ರಂದು ಶಿವಲಿಂಗ ಸರ್ಜನನ್ನು ಸಿಂಹಾಸನದಲ್ಲಿ ಕೂರಿಸಿ ಮತ್ತೊಮ್ಮೆ ಪಟ್ಟಾಭಿಷೇಕವನ್ನು ನೆರವೇರಿತು.

ರಾಣಿ ಚೆನ್ನಮ್ಮನ ಪತಿ ದೊರೆ ಮಲ್ಲಸರ್ಜನು 1816 ರಲ್ಲಿ ತೀರಿಕೊಂಡಾಗ ತಂದೆಯಂತೆಯೇ ಶಿವಲಿಂಗರು ದ್ರಸರ್ಜನೂ ಸಹ ಉತ್ತಮ ಆಡಳಿತಗಾರನಾಗಿದ್ದನು 1824ರಲ್ಲಿ ಈತ ತೀರಿಕೊಳ್ಳುವ ತುಸು ಮೊದಲು ಸ್ವಂತ ಮಕ್ಕಳಿಲ್ಲದೇ ಇರುವ ಕಾರನಕ್ಕಾಗಿ ಸಂಸ್ಥಾನಕ್ಕೆ ಉತ್ತರಾಧಿಕಾರಿಯು ಬೇಕು ಎಂದು ದತ್ತಕಪುತ್ರನ್ನನ್ನು ಮಾಡಿಕೊಂಡಿದ್ದ. ಈ ದತ್ತಕ ಪ್ರಸಂಗವು ಶಿವಲಿಂಗರು ದ್ರಸರ್ಜನ ಸಮ್ಮತಿ ಇಲ್ಲದೇ ಆಗಿರುವ ದತ್ತಕ ಎಂಬ ನೆಪವೊಡ್ಡಿ ಬ್ರಿಟೀಷರು ಕಿತ್ತೂರನ್ನು ಕಳಿಸಲು ಹೊಂಚು ಹಾಕಿದರು. ಚೆನ್ನಮ್ಮ ರಾಣಿಯು ಯಾವುದೇ ಪ್ರಸಂಗ ಬಂದರೂ ಪರಕೀಯರು ಕಿತ್ತೂರನ್ನು ವಶಪಡಿಸಿಕೊಳ್ಳುವುದು ಸಾಧ್ಯವಿಲ್ಲ ಎಂಬುದಾಗಿ ಘಂಟಾಘೋಷವಾಗಿ ಸಾರಿಹೇಳಿ ಮಾತೃಭೂಮಿಯ ರಕ್ಷಣೆಗೆ ಎಲ್ಲ ತ್ಯಾಗಕ್ಕೂ ಸಿದ್ದರಿರುವಂತೆ ಪ್ರಜೆಗಳನ್ನು ಹುರಿದುಂಬಿಸಿ ಯುಧ್ದ ಮಾಡಿದಳು.

ಏನೇ ಆದರೊಕಿತ್ತೂರ ವಿಜಯೋತ್ಸವದ ಆಕ್ಷಣಗಳು ಬಹಳದಿನಗಳಿಗೆ ಉಳಿಯಲಿಲ್ಲ ಕೊಡಲಿ ಕಾವು ಕುಲಕ್ಕೆ ಮೃತ್ಯು ಎಂಬತೆ ಅಲ್ಲಿಯ ಕೆಲವು ಸಮಯ ಸಾಧಕ ಸ್ವಾರ್ಥಿಗಳ ಪಿತೊರಿಯಿಂದ ಬ್ರಿಟಿಷರು ಕಿತ್ತೊರು ಸಂಸ್ಥಾನದ ಆಯಕಟ್ಟಿನ ವಿಷಯಗಳನ್ನು ಯುದ್ದ ರಹಸ್ಯಗಳನ್ನು ತಿಳಿದುಕೊಡರು ಮುಂದಿನ ಎರಡು ತಿಂಗಳಿನಲ್ಲಿ ಈ ಎಲ್ಲ ಅವಕಾಶಗಳನ್ನು ಉಪಯೋಗಿಸಿ ಸಮಗ್ರ ಸಿದ್ದತೆಯೊಂದಿಗೆ ಬೆಳಗಾವಿಯಿಂದ ಚಾಪ್ಲಿನ ನೇತೃತ್ವದಲ್ಲಿ ಬ್ರಿಟಿಷ ಸೈನ್ಯವು ಕಿತ್ತೊರನ್ನು ನಾಲ್ಕೊದಿಕ್ಕಿನಂದ ಮುತ್ತಿತು ಕಿತ್ತುರನ್ನು ಬಗ್ಗುಬಡಿಯುವ ಉದ್ದೆಶದಿಂದ ಅವಶ್ಯಕತೆ ಬಿದ್ದಾರೆ ಇರಲಿ ಎಂದು ಸೋಲಾರ್ಪ ಬಳ್ಳಾರಿ ಗುತ್ತಿ ಮೆಗುರ್ಲ ಮೈಸೊರಿನಲ್ಲಿ ಆಂಗ್ಲರು ಸೈನ್ಯವನ್ನು ಸಿದ್ದವಾಗಿರಿಸಿಕೊಂಡಿದ್ದರು ಪಾತಕಿಗಳ ದುಕ್ಷತ್ಯದಿಂದ ಕಿತ್ತೊರಿನ ತೋಪುಗಳು ರಸ್ಸುಮದ್ದುಗಳಾಗಿ ವಿಫಲವಾದವು ಬ್ರಟಿಷರು ಆದುನಿಕ ಶಸ್ತ್ರಾಸ್ತ್ರಗಳು ಹಾಗು ಪಿರಂಗಿಗಳ ಮುಂದೆ ದೇಶಿಯ ಆಯುಧಗಳು ನಿಲ್ಲಲಾದವು.

ಜನಪದ ಹಾಡುಗಳಲ್ಲಿ ಕಿತ್ತೊರಿನ ಐತಿಹಾಸಿಕ ಪ್ರಸಂಗಗಳನ್ನು ನಮ್ಮ ಜನಪದ ಕವಿಗಳು ಹಾಡಿದ್ದಾರೆ ಕಿತ್ತೊರ ಸಂಸ್ಥಾನವು ಬೆಳಗಾವಿ ಭುಭಾಗದ ಪಂಚಪುರ್ಣವಾಗಿತ್ತು ಈ ಭಾಗದಲ್ಲಿ ದೊರೆಯುವ ಹಂತಿಯ ಹಾಡುಗಳಲ್ಲಿಯೊ ಕೋಲುಪದಗಳಲಿಯು

ಎಂದಿಗು ಮಾಸದ ಕಿತ್ತೂರು ಇತಿಹಾಸವನ್ನು ಕಾಣಬಹುದು ಈ ಗಡಿನಾತ ರಾಜ್ಯವನ್ನು ಜನರಿಗೆ ಕಣಿಯಾದ ಬಣಿಜಗ ಮಲ್ಲಣ್ಣನೇ ಕಟ್ಟಿದನ್ನು ಇವನ ಕಾಲದಲ್ಲಿ ನಾತೊಳಗೆ ಲಕ್ಕಸಮಿಯ ಕುಣಿದು ಕಿತ್ತುರು ಮತ್ತು ಮಾಣಿಕದ ಕಣವಾಯಿತು ಮತ್ತು ಮಾಶಿಕದೊಡೆಮ ಕಿತ್ತೂರು ಕಡೆಯರಸು ಮಲಸರ್ಜದೊರೆಯುವಂತ ಜನರಿಗೆ ಬೇಕಾದ ಅರಸರಿದ್ದಿಲ್ಲವಂತೆ ಅವನೇ ಕಿತ್ತೂರು ರಮಾನೆಯನ್ನು ಕಟ್ಟಿಸಿದನೆಂದು ಹಾಡಿನಲ್ಲ ಬರುವುದು

ಬಜಾಜಿಗ ಮಲ್ಲನಜನದಾಗ ಕಣಿಯಾದ

ಕುಣಿಸಿ ಲಕ್ಕಸಮಿನಾದಾಗ ಕಿತ್ತೂರು

ಕಣಜಾತು ಮುತ್ತು ಮಾಣಿಕದ

ಸೊಗಲೆಂಬು ಊರಿಲ್ಲ ಸಮುದರಕ ನೆಲೆಯಿಲ್ಲ

ಜ್ಯಾತ ಮುತ್ತಿಗಿ ಬೆಲಿಯಿಲ್ಲ ಕಿತ್ತೂರು

ಮಲಸರ್ಜನಂಥ ದೊರೆಯಿಲ್ಲ

ರಂಗಕಿತ್ತೂರು ಮೂಲ ಹೊಕ್ಕು ನೋಡುಣ ಬಾರ

ಮೂಲ ಮಾಲಿಲ್ಲ ಕನ್ನೂಡಿ ಮಲಸರ್ಜಾ

ಮೂಲ ಕಟ್ಟಿಸಿ ಇರಲಿಲ್ಲೊ

ಮಲಸರ್ಜಾ ದೊರೆಯ ಸರುವಾಯ ಪಟ್ಟಕ್ಕೆ ಬಂದ ಶಿವಲಿಂಗರುದ್ರನಿಗೆ ಸಾವು ಕೂಡಲೇಬಂತು ಅರಮನೆಯಲ್ಲಿ ಕದನೆದ್ದು ದತ್ತಕ ಪ್ರಕರಣ ಬೆಳೆದು ಒಡಕು ಹುಟ್ಟ ಕಿತ್ತೂರು ಕದನಾಗಿ ಥಾಕರೆ ಸಾಹೇಬನು ಆಹುತಿಯಾದನು.

ಕಿತ್ತೂರ ಮಲಸಜ್ಜ ಕಿಚ್ಚ ಕಂಜವನಲ್ಲ

ದತ್ತಗೇಡೊಬ್ಬ  ಮಗಹುಟ್ಟ ಕಳೆದಾನು

ಹತ್ತ ತಲಿಗಂಡ ವತನಾವೂ

ಧಾರ್ವಾಡ ವೆಂಕಾಟ ದಾರೆಳಿಲೆ ಸಿರಕೋಡ

ಕಾರಭಾರಿಗಳು ಕಿವಿಗೊಟ್ಟು ಕಿತ್ತೂರ

ಚುರು ಚುರಾತೊ ಕದನಾತೊ

ಗಂಡನ್ನ ಕಳಕೊಂಡ ಬೆಂಡಾದ ಚೆನ್ನಮ್ಮ

ಗಂಡಾಗಿ ರಣಕ ಇಳಿದಾಳೊ ನಾಡನ್ನ

ಪುಂಡಬಂಡಾಯ ಹಿಂಡಾಕೊ

ಕೆಂಪುಮೋರೆಯದಂಡು ಚಿಂಪಾಗಿ ಸಿಡಿದೀತೊ

ರಂಪರಂಪೆಂದು ಓಡೀತೊ ಅಮಟುರ

ಬಾಳಗುಂಡಿಟ್ಟೊ ಥಾಕರೆಗೊ

ಈ ಸುದ್ದಿಯ ಬೆಳಗಾವಿಗೆ ತಲುಪಲು ಚಿಮ್ಲೆನ್ನ ಸಾಹೇಬನು ಉದಿ ಹರಿಯುವದರೊಳಗೆ ಜಮಖಂಡಿ ದೇಸಾಮಿಯ ಸಹಾಯದಿಂದ ಕಿತ್ತುರುಮುತ್ತಿದನು ಅರಮನೆಯಲ್ಲಿ ಪಿತೂರಿಯಾಗಿ ಕಿತ್ತೂರು ಬಿದ್ದು ಹಾಳಾಯಿತು ಕಿತ್ತೂರು ೨ ನಸಿಬ ಕಿತ್ತೂರು ಪಿಸಿರಿಯನ್ನು ಜಮಖಂಡಿ ದೇಸಾಯಿಯೊ ಇಂಗ್ಲಿಷರು ಸಮನಾಗಿ ಹೊತೊಯ್ದರು.

ಬೆಳಗಾವಿ ಜಿಲ್ಲೆಯನ್ನು ಒಳಹಾದಿಲೆ ದಂಡೆತ್ತಿ

ಬೆಳಗಾಗಿ ದಂಡು ಬಿಡಿಟ್ಟೊ ಕಿತ್ತೂರು

ತಳಮಳ ನೋಡೋ ಹುದಾಗು

ಜಮಖಂಡಿ ದೇಸಾಯಿ ಯಮಕಿಲೆಕೊಡಿದ

ಸಮಯಕ್ಕ ಜಿಲ್ಲೆಯನ್ನು ದಂಡಿಗೊ ಕಿತ್ತೂರು

ಸಮನಾಗಿಸಿರಿ ಹೊತೊಯ್ದೊ

ಚೆನ್ನವ್ವ ದೇಸಾಯಿಣಿಯನ್ನು ಸೆರೆಯಿಡಿಯಲು ಇಂಗ್ಲಿಷರುಸುತ್ತಲು ಹುಡುಕು ಹತ್ತಿದರು. ಚಿಂತೆಯಲ್ಲಿ ಬೆಳಗಾಯಿತು ಚೆನ್ನಮ್ಮನ ವನವಾಸವನ್ನು ನೋಡಿ ಅರಮನೆಯ ಚಿತ್ತರದ ಗೊಂಬೆಗಳು ದನಕರುಗಳು ಅತ್ತವೆಂದು ಹಾಡಿ ಅದರೊಡನೆ ಜನವು ಅತ್ತಿದೆ

ಎಂಥಾದ ಕಿತ್ತೂರು ಚಿಂತ್ಯಗ ಬೆಳಗಾತ

ಕೆಂಪು ಮೋತೆವರು ಒಲಿಹುಡಿ ಚೆನ್ನವ್ವ

ಚಿತ್ತರ ಮೊಲ ಮುರಿದಾದರು

ಕಿತ್ತೂರು ಕಿಲ್ಲೇಕ ಹತ್ತು ಕಾಲ್ನಡಿಕಿ

ಕೊತ್ತ ಕೊತೊಳಕ ಕೈ ಪಂಜು ಹಿಡಿಕೊಡು

ಸುತ್ತು ಚೆನ್ನವ ಹುಡಿಕ್ಯಾರು

ಕಿತ್ತೂರು ಶರಮಾರಿ ಮತ್ತೇನ ಹೇಳಲಿ

ಚಿತ್ತರದ ಗೊಂಬೆ ಅಳತಾವ ಚೆನ್ನವಣ

ಹಿಂಡೆಮ್ಮಿ ಹಸಮ ಉಳಿಗಾರ

ಕಂಗೆಟ್ಟ ಕಿತ್ತೂರು ವಿರರು ಇಂಗ್ಲೀಷರ ದಬ್ಬಾಳಿಕೆಯನ್ನು ಸಹನ ಮಾಡಲಿಲ್ಲ ಬಡ ಬಗ್ಗರಿಗಗೆ ಅಧುರವಾದ ಅರಸು ಮನೆತನವು ನಾಶವಾಗಲು ಜನವು ಕಳವಳಗೊಂಡು ರಾಯಣ್ಣನನ್ನು ಮುಂದು ಮಾಡಿ ಬಂಡಾಯ ಹೊಡಿತು ರಾಯಣ್ಣನಿಗೆ ಹೆದರಿ ಇಂಗ್ಲೀಷರು ಮೊಸಮಾಡಿ ಅವನನ್ನು ಹಿಡಿತರಿಸಿ ನಂದಗಡದಲ್ಲಿ ಗಲ್ಲಿಗೇರಿಸಿದರು ಈ ಗೊಂದಲ ಶೊರನಿಗೆ ದುರುಮರಣ ವೆಂದು ಜನಪದರು ದುಃಖಿಸಿದ್ದಾರೆ

ಸಂಗೊಳ್ಳಿರಾಯಣ್ಣ ಹಂಗ್ಗಡಿದ ದಳವಾಯಿ

ದಂಗೆ ಎಬ್ಬಿಸಿದ ನಾಡಾಗೊ ಕಿತ್ತೂರ

ಕಂಗೆಟ್ಟು ಜನರು ಕೊಡ್ಯಾರು

ನಂದಗಡ ಊರಾಗ ಮಂದ್ಯಾಗ ರಾಯರಿಗೆ

ತಂದು ಶೊಲಕ ಹಾಕ್ಯಾರೊ ಕಿತ್ತೂರು

ಗೊಂದಲ ಶೊರಗ ದುರುಮರಣ

ಈ ಜನಪದ ಹಾಡುಗಳಲ್ಲಿ ಕಿತ್ತೂರು ಇತಿಹಾಸವು ಸಮಗ್ರವಾಗಿ ಬಂದಿದೆ. ಕಿತ್ತೂರು ರುದ್ರವ್ವರಾಣಿಯು ಸಾಯಲು ಇಡಿ ಕಿತ್ತೂರು ಸಂಸ್ಥಾನವೇ ದುಃಖಿಸಿದ ಇದನ್ನು ರುದ್ರವ್ವನ ಕೋಲಹಾಡಿನಲ್ಲಿ ನಾವು ಕಾಣುತ್ತೇವೆ ರುದ್ರವ್ವ ರಾಣಿಗೆ ರೋಗವು ಹೆಚ್ಚಾಗಲು ಅರಮನೆಯಲ್ಲಿ ಗಡಿಬಿಡಿಯಾಗಿ ತಲ್ಲೊರಿಗೆ ಸುದ್ದಿಯು ತಲುಪಿತು ತಲ್ಲೊರ ಸರುಬಳಗವೊ ದುಃಖದಲ್ಲಿ ಮುಳಗಿತು ಎಂದು ಜನಪದ ಕವಿಗಳು ಹೇಳುವರು

ಕೋಲೆನ್ನ ಕೋಲ "ಪ"

ಅದ್ರಚಿದ್ರದ ಬ್ಯಾನಿ ಚಿದ್ರ ಚಿಲಕದ ಬ್ಯಾನಿ

ರುದ್ರವ ಬ್ಯಾನಿ ಬಲು ಬ್ಯಾನಿ "ಕೋ"

ದಾರಿಲಿಹೋಗುವಾಗ ಮಾರಿಯ ನೋಡ್ಯಾರ

ಮಾರಿಲಿ ಹೋಗುವಾಗ ಮಾರಿಯ ನೋಡ್ಯಾರ

ಮಾರಿ ನೋಡಿ ನೋಡಿ ಅಳತಾರ ।ಕೋ।

ಮನಸಿಟ್ಟು ನಿ ಹೆಣ್ಣು ಮನಿಬಿಟ್ಟು ಹೋಗುವಾಗ

ಕಂಗಳ್ಳುದುರ‍್ಯಾವು ಉದಾಕವು ।ಕೋ।

ಮಣ್ಣೀನ ಈ ಕಾಯ ಮಣ್ಣಿಗೆ ಹೋಗುವಾಗ

ಮಣ್ಣುನಿಕ್ಯಾಕೋ ಮನದಾಗೋ ।ಕೋ।

ಅತ್ತರ ಏನೈತಿ ಕರದರ ಏನೈತಿ

ತಲವೊರಿನ ಸುದ್ದಿ ಕಳುಹರಿ ।ಕೋ।

ಅಂಗಳ ಹೂಡಗು ಹೋತ್ತಿಗೆ ಗಂಗಳ ಬೆಳಗು ಹೊತ್ತಿಗೆ

ಬಂದಾವ ರುದ್ರವ್ನ ಅವಸುದ್ದಿ ।ಸೋ।

ಅವಸುದ್ದಿ ಕೇಳ್ಯಾನ  ಚಿತ್ತಲಗುದರಿ ವರ‍್ಯಾನ

ಅಣ್ಣು ಚಂದ್ರಣ್ಣ ಅವರಸರಿ ।ಕೋ।

ಮುತ್ತಿನ ಕಂಬಕ ಹಾದನ ಅವರಣ್ಣ

ಮುತ್ತಿನ ನನಲು ಎರಡ್ಯಾದೆ ।ಕೋ। ಚಂದ್ರಪ್ನ

ಹತ್ತಲಿದ್ದವರು ಹಿಡಿರೆಣ್ಣ ।ಕೋ।

ಅಕ್ಕಿಯ ಹುಗ್ಗಿಯು ಉಕ್ಕ್ಯಕ್ಕಿ ಕುದ್ದಂತೆ ಜೋಳದ ಬಾನವು ಹಾರ‍್ಹಾರಿ ಕುದ್ದಂತೆ ಸರುಬಳಗವೆಲ್ಲ ಅಳುತ್ತಿರಲು ರುದ್ರವ್ವರಾಣಿಯು ಹಕ್ಕಿಯಾಗಿ ಬಾಯಿಬಿಟ್ಟಳು. ಪ್ರಾಣೆಪಕ್ಷಿಯ ಪಂಜರಬಿಟ್ಟು ಹಾರಿಹೋಯಿತು ಅರಮನೆಯೇ ಅಳಹತ್ತಿತು ದೊರೆ ಮಲ್ಲಸರ್ಜನು ಮುತ್ತೋದರಾಣಿಯ ನೆನನೆನಸಿ

ದೇವನ್ನ ಮುನಿದ್ಯಾ ।ಪ।

ಮುತ್ತಿನ ಕಂಬಳ ಹತ್ತಿ ನಿಲ್ಲುವಂತ

ಮುತ್ತೋದಿರಾಣಿ ಮರೆಯಾದಿ ।ದೇ।

ಕಾಜಿನ ಕಂಬಕ ಮೋಜಿಲಿನಿಲ್ಲುವಂತೆ

ಮೋಜಿನ ರಾಣಿ ಮರೆಯಾದೆ ।ದೇ।

ಹಾಲಹಾಲನಂದು ಹಲಬೀದೆ ರುದ್ರರಾಣಿ

ಹಾಲೀಗೆ ನಿನಗ ರುಣವಲ್ಲ ।ದೇ। ಸಂಗೊಳ್ಳಿ

ಹಾದೀಗೆ ನಿನಗೆ ರುಣವಾದೆ ।ದೇ।

ಕೋಲೆನ ಕೋಲ ।ಪ।

ಸಂಗೊಳ್ಳಿ ಹಾದ್ಯಾಗ ಮುಂದ್ಯಾಕ ಬಳಗ್ಯಾಕ

ಚಂದ್ರ ಜೋತ್ಯಾಕ ಎಡಬಲಕ ।ಕೋ।

ರುದರವ್ವ ಚಂದಾಗಿ ಮಣ್ಣ ಕೊಡತಾರ ।ಕೋ।

ಸಂಗೋಳ್ಳಿ ಗ್ವಾಡಿಗೆ ಚೆಂದಾಗಿ ಕುಳಿತೇನೆ

ಚಂದಾಳಗೊಂಬಿ ರುದ್ರರಾಣಿ ।ಕೋ।

ನಿನ್ಬಿಟ್ಟು ಹ್ಯಾಂಗಕಿತ್ತೂರು ಹೊಗತ್ತಿಳ ।ಕೋ।

ಜನಪದರು ಹಾಡುಕೇಳಹತ್ತಲು ಅಳುತುಂಬಿ ದುಃಖವು ಒಟ್ಟಿರಸಹತ್ತುವುದು ಅಂದು ದೊರೆಮಲ್ಲಸರ್ಜನು ದುಃಖಿಸುವುದನ್ನು ನೋಡಿ ಜನರಿಗೆ ಹೇಗಾಗಿರಬಹುದು ಎಂಬ ಕಲ್ಪನೆಯು ಎಲ್ಲರಿಗೆ ಬಾರದಿರದು

ರಾಯ ಚೆನ್ನಮ್ಮಕುಡಿ ಏಕಾಂತ ವಿಚಾರ ಮಾಡಿ

ಮೂಸ ಮರಡಿ ಅಪ್ಪಾಸಾಬನ ತಗೊಂಡ್ರ ದತ್ತಕಾ।

ಈ ಸುದ್ದಿಯ ಹೋಗಿ ಮುಟ್ಟೀತು ಮುಂಬೈಯಿಕ।

ಕೇಳಿ ಕುದುರಿಯೇರಿ ಬಂದ ಥ್ಯಾಕರೆ ಸಂಧಾನಕ।

ಕಿತ್ತೂರು ಚೆನ್ನಮ್ಮನ ಕರಿಸಿ ಒತ್ತುಯಿಲೆ ಹೇಳತಾನ

ಒಪ್ಪಂದ ಅಗಿರೆಂದು ಸರಕಾರಕ ಹಟಬ್ಯಾಡಿದಕ।

ಕೊಬ್ಬಿನಿಂದ ಚೆನ್ನಮ್ಮ ಅಬ್ಬರಿಸಿ ನಡದಾಳ

ಹೆಬ್ಬುಲಿ ಜಿಗಿದ್ಹಾಂಗ ಅಕಳಕ

ಕನ್ನಡ ಅಬಲಿಯರೆಂದರೇನು ಕ್ಷುಲಕ।

ಪ್ರಾಣ ಹೋದ್ರು ಚಿಂತೆಯಿಲ್ಲ ಈ ವಿಷಯಕ।

ಉಗ್ರ ಕೋಪಿನಿಂದ ಥ್ಯಾಕರೆ ಲಬ್ಧನಾಗಿ ಹಲ್ಲಕಡದ

ನಲ್ಲಿಯರಿಗ್ಯಾಕ ಇಷ್ಟ ಧಿಮಾಕ।

ಮುರಿದೀತ ಸೊಕ್ಕ।

ಜನಪದಣ ಲಾವಣಿ ಹಾಡುಗಳಲ್ಲಿ ಅಂದಿನ ಯುದ್ಧದ ಉತ್ಸಾಹಲಯ ಎದೆ ಬಡಿತ ಹೆಚ್ಚಿಸುತ್ತದೆ. ಥ್ಯಾಕರೆಯ ಚಂಡು ಹಾರಿಸಿದ ಚೆನ್ನಮ್ಮ ಅಂದಳತೆ;

ಬರಲಿನ್ನ ಇಂಗ್ಲೀಷ ದಂಡ।

ಮಾಡತೇನ ತುಂಡ।

ಚೆನ್ನಮ್ಮನ ಆದೇಶದಂತೆ ದತ್ತು ಪುತ್ರನನ್ನು ರಕ್ಷಿಸಿ ರಾಯಣ್ಣ ಹಂದೀಬಡಗನಾಥಕ್ಕೆ ಹೋದನಂತೆ ಮುಬಯಿಯಿಂದ ಬಂದ ಬ್ರಿಟಿಷ ವಡೆಯನ್ನು ಬಗ್ಗುಬಡೆದನಂತೆ

ಜಗಳದ ಪರಿಯನ್ನು ಪೇಳುವೆ ಮನಸಿಟ್ಟು

ಸುಗುಣರು ಚೆಂದಾಗಿ ಕೇಳಿರಿ । ಮೊ

ಮಗಿಮಳಿಯಂತೆ ಗುಂಡ್ಹಾರುತಿರಿ ಮದ್ದಿನ

ಹೊಗೆ ಮುಸುಕಿತು ಕಣ್ಣು ಮುಂದೆ

ಮಿಗಿಲಾದ ಥ್ಯಾಕರೇಸಾಯ್ಬ ತಾ ಮಡಿದಾನು

ಸಿಗಲಾಗಿ ಉಳಿದವರು ಕೈಸೆರೆಯ । ಮೊ

ನಗೆಯಲ್ಲ ನಾಲ್ಕು ದಿಕ್ಕಿನ ದಂಡು ಮುರಿದು

ಹೆಗಲ ಮ್ಯಾಲಿನ ಕೋವಿ ಒಗದೋಡಿತು

ಸತ್ತ ಥ್ಯಾಕರೆಸಾಯ್ಬ ಎಂಬಂಥ ಸುದ್ದಿಯು

ಹತ್ತಿತು ಧಾರವಾಡ ಪುರಕಿನ್ನು । ಮೊ

ವ್ಯರ್ಥವಾಯಿತೆಂದು ಎಲ್ಲಾರು ಮಾತಾಡಿ ಉತ್ತರ ಬರೆದಾರು ವಿಲಾಯ್ತಿಗೆ

ಅತ್ತಾಲಾ ಸುದ್ದಿಯು ಹೋದಾಕ್ಷಣದಲ್ಲಿ

ಕಿತ್ತೂರುನಾಳ್ವಂಥ ಜಾಣೆಯು । ಮೊ

ಮುತ್ತಿಗೆ ಬರುತ್ತದೆ ಬೇಗನೇಳಿರೆಂದು

ಸಾಹಿತ್ಯ ಪುರೈಸು ಪುತ್ರಿಯೇನೆಂಬೆ

ಮುಚ್ಚುಗಾವಿಯ ಚಣ್ಣ ಮುಂಗೈಯ ಸರಪಳಿ

ಬಿಚ್ಚುಗತ್ತಿಯ ಸಾರ ಕ್ಷತ್ರಿಯರು । ಮೊ

ಹಚ್ಚನ್ನ ಮುಂಡಾಸೆ ಮೇಲೆ ಸುಮಾನಗರಿ

ಹೆಚ್ಚಿನ ಬಂಟರ ಕರೆಸಿ ದಳಕ

ಮಚ್ಯ ಹೇಳುವುದಿಲ್ಲ ಕೇಳಿರಿ ಮುಂದಿನ್ನು

ಕಿಚ್ಯನಂಥ ದಂಡು ಬುರುತೈತಿ । ಮೊ

ಎಚ್ಚತುಕೊಳಿರಿ ಎನ್ನ ಮಾತ್ರ ನಿವು

ಬಚ್ಚಿಟ್ಟು ಮಾನವ ಕಾಯಬೇಕು

ಕ್ಷಿಣರ ಕೈಯಲ್ಲಿ ಸಿಲ್ಕಿ ಕಟ್ಟಿಗೆ ಎನ್ನ

ಪುಣವ ನಿಗುವದು ಹಸನಲ್ಲ । ಮೊ

ಜಾಣತನದಿಂದ ಮೊದಲಿಗೆ ಮುದ್ದಿನ

ಕೋಣೆಯ ಹೊಗುವುದು ಉತ್ತಮವು

ರಾಣಿಯಾಡಳಿತದ ನುಡಿಕೇಳಿ ಬಂಟರ

ತ್ರಾಣವಿನ್ನೆಂತು ಹೇಳಲಿನಾ । ಮೊ

ಕ್ಷಿಣರೆಲ್ಲರ ತಲೆ ಬೀಳುವನರ ನಿನ್ನ

ಕಾಣುಗೊಡೆವು ಚಿಂತಿ ಬ್ಯಾಡೆಂದು ಸಾರೆ

ಯುದ್ಧದಲ್ಲಿ ಪೆಟ್ಟುತಿಂದ ಕಂಪನಿ ಸರಕಾರ ಸುಮ್ಮನೆ ಕೊಡಲಿಲ್ಲ ಸುಸಜ್ಜಿತ ಸೈನ್ಯದೊಂದಿಗೆ ಹೊತ್ತು ನೋಡಿ ಕಿತ್ತೂರಿಗೆ ಹಾಕಿತು ಚನ್ನಮ್ಮನ ಕಾರ್ಯ ಮುಣಗುಡುವಂತೆ ಹೋರಾಡಿತು ಕಿತ್ತೂರು ಸೈನ್ಯ ದಿಕ್ಕು ಪಾಲಾಯಿತು ಬ್ರಿಟಿಷರು ಚೆನ್ನಮ್ಮನನ್ನು ಬಂಧಿಸಿ ಬೈಲಹೊಂಗಲದಲ್ಲಿಟ್ಟರು ಇದು ಕಿತ್ತೂರು ಸಂಸ್ಥಾನದ ಕಣ್ಣಿರಿನ ಕಥೆ ಈ ಕಥನಗೀತೆಯನ್ನು ದುಂದುಮೆಯ ದಾಟಿಯಲ್ಲ

ಹಾಡಿ ಕಿತ್ತೂರು ಸ್ವಾತಂತ್ರ್ಯದ ಹೋರಾಟವನ್ನು ಅಜರಾಮರಾಗಿ ಮಾಡಿದ ಶ್ರೇಯಸ್ಸು ಮಾಗಡಿಬಸವನಿಗೆ ಸಲ್ಲತ್ತದೆ. ಕನ್ನಡ ನಾಡು ನುಡಿಯ ಅಭಿಮಾನ ಈ ಜನಪದ ಗೀತೆಯಲ್ಲಿ ಅತ್ಯಂತ ರಸವತ್ತಾಗಿ ವರ್ಣಿಸಿದ್ದಾರೆ

ಹೀಗೆ ಪ್ರಬಲ ಬ್ರಿಟಿಷರಿಗೆ ಸವಾಲೊಡ್ಡಿದ ಎದೆಗಾರ್ತಿ ಚೆನ್ನಮ್ಮ ಹುಟ್ಟಿದ್ದು ಬೆಳಗಾವಿ ಸಮಿಪದ ಉತ್ತರಕ್ಕಿರುವ ಕಾಕತಿಯ ದೇಸಾಯರ ಮನೆತನದಲ್ಲಿ ರಾಜವಂಶಜರಿಗೆ ತಕ್ಕಂತ ಶಿಕ್ಷಣ ತರಬೇತಿ ಚಿಕ್ಕಂದಿನಲ್ಲಿ ಚೆನ್ನಮ್ಮನಿಗೆ ದೊರೆಯಿತು ಜನಪದ ಕವಿಗಳೊ.

ಕಾಡಿಗೆ ತಂದಿ ಜೊತೆಗೊಡಿ । ಕುದುರಿ ಸವಾರಿ ಮಾಡಿ ಹೋಗುತ್ತಿದ್ದ ಜೋಡಿ । ಹುಲಿಚರ್ಮ ಹೊಡಿಯೋಳು ಮಾಡಿ ॥.......ತುಂಬಿದ ಹೊಳಿ ದಾಟೊಳ ಈ ನಾಡಿ....... ಎಂದು ವರ್ಣಿಸಿದ್ದಾರೆ

ಇನ್ನು ಚೆನ್ನಮ್ಮನ ರೂಪ ಮತ್ತು ಸೌಂದರ್ಯದ ಬಗ್ಗೆ

ಮಲ್ಲಸರ್ಜನ ನಾರಿ ಮೊಲೋಕ ಸುಂದರಿ

ಮಾಲೊಳಗೆ ರತ್ನದಾ ಹರಳ ।ಕೋ। ಚೆನ್ನಮ್ಮ

ಆರುತಿ ಬೆಳಕ ನಗಿಯೊರೆ ।ಕೋ।

ಕಾಕತಿ ದೊರೆಗಳ ತಾಕತು ಸಿರಿಮಗಳು

ಬೇಕಾದ ಮಡದಿ ಮಲ್ಲಸಜ್ಜಗ ।ಕೋ। ಚೆನ್ನಮ್ಮ

ನಾಕು ದಿಕ್ಕಿಗೆ ಮನ್ನಣೆ ॥ಕೋ॥....... ಎಂದು ವರ್ಣಿಸಿದ್ದಾರೆ.

ಸಂಶೋಧಕರ ಪ್ರಕಾರ ಚೆನ್ನಮ್ಮರಾಣಿಗೆ ಚಿಕ್ಕಂದಿನಿಂದಲೇ ಕನ್ನಡದೊಡನೆಯೇ ಉರ್ದು ಮರಾಠಿ ಭಾಷೆಗಳನ್ನು ಕಲಿಸಲಾಯಿತು. ಬಸವಪುರಾಣ ರಾಮಾಯಣ ಮಹಾಭಾರತಗಳಲ್ಲಿ ಹಾಗು ಇತಿಹಾಸ ಕಲಿವಿಕೆಯ ಜೋತೆಗೆ ಮಳಿಗೆ ಇಂಗ್ಲೀಷಿನ ವ್ಯವಹಾರಿಕ ಜ್ಞಾನವು ಇತ್ತೆಂದು ತಿಳಿದು ಬರುತ್ತದೆ. ಪಟ್ಟದರಸಿಯ ಎಲ್ಲ ಗುಣಧರ್ಮ ಹೊಂದ್ದಿದು ಚೆನ್ನಮ್ಮನ ಮಲ್ಲಸರ್ಜದೊರೆಯ ಎರಡನೆಯ ಪತ್ನಿಯಾಗಿ ಸ್ವಿಕರಿಸಿದನು. ಕಾಕತಿಯ ಕನ್ಯೆ ಕಿತ್ತೂರಿನ ರಾಣಿಯಾಗಿ ಅರಮನೆ ಪ್ರವೇಶಿಸಿದಳು ಅಲ್ಲಿಯೊ ತನ್ನ ವಿಶಾಲ ಮನೋಭಾವ ಚಾಣಾಕ್ಷ ಬುದ್ದಿಯಿಂದ ಎಲ್ಲರ ಮನವನ್ನೊಗೆದ್ದು ಪ್ರಶಂಸೇಗೆ ಪಾತ್ರಳಾದಳು ಕಿತ್ತೂರು ರಸರ ಪ್ರಜಾವಾತ್ಸಲ್ಯಕೆ ಸಾಕ್ಷಿಯಾಗಿ ಅನೇಕ ಜನಪದ ಕಾರ್ಯಗಳನ್ನು ಕೈಗೊಡಳು.

ಈಗ ಕಿತ್ತೂರಿನ ಕೋಟೇ ಕ್ಷಿಣಿಸಿದರು ಚೆನ್ನಮ್ಮನ ಹೆಸರಿನಲ್ಲಿ ಬಾಲಕಿಯರಿಗಾಗಿ ಸೈನಿಕ ಶಾಲೆಯ ಮಾದರಿಯಲ್ಲಿ ಒಂದು ಸುಸಜ್ಜಿತ ಭವ್ಯ ವಸತಿ ಶಾಲೆ ನಡೆಯುತ್ತಿದ್ದೆ ಬೆಳಗಾವಿಲ್ಲಿ ರಾಣಿಚೆನ್ನಮ್ಮ ವಶ್ವವಿದ್ಯಾಲಯ ಹೆಸರು ಇಡಲಾಗಿದೆ ರಾಣಿ ಚೆನ್ನಮ್ಮ ಬ್ರಟಿಷರ ಎದುರು ಹೋರಾಡಿ ಜಯಗಳಿಸಿರುವ ಅಕ್ಟೋಬರ್ 23ನ್ನು ಮಹಿಳಾ ದಿನಾಚಾರಣೆ ಎಂದು ಆಚರಿಸಲಾಗುತ್ತದೆ. ದೆಹಲಿಯ ಪಾರ್ಲಿಮೆಂಟ್ ಭವನದ ಅವರಣದಲ್ಲಿ ರಾಣಿಚೆನ್ನಮ್ಮಳ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಈ ರೀತಿಯಲ್ಲಿ ನಾಡಿನ ಜನಮಾನಸದಲ್ಲಿ ದೇಶದ ಇತಿಹಾಸದಲ್ಲಿ ಚೆನ್ನಮ್ಮ ಅಜರಾಮರ ಸ್ಥಾನವನ್ನು ಗಳಿಸಿದ್ದಾಳೆ

## ಆಕಾರ ಗ್ರಂಥಗಳು


1) ನಿಂಗಣ್ಣ ಸಣ್ಣಕ್ಕಿ ಮತ್ತು ಶೀವರುದ್ರಪ್ಪ ಬಾವಿಕಟ್ಟಿ ; ಜಾನಪದಲ್ಲೆ ಕಿತ್ತೊರು

2) ವೈ. ಕೆ ಮುದ್ದಾಕೃಷ್ಣ (ಪ್ರ.ಸಂ) ; ಸ್ವರ್ಣ ಸಂಚಯ

3) ಎಂ.ಎಸ್.ಸುಂಕಾಪುರ (ಸಂ) ; ಜೀವನ ಜೋಕಾಲಿ ಭಾಗ–5

4) ನಿಜಲಿಂಗಪ್ಪಾ ಮಟ್ಟಿಹಾಳ ; ವಿಜಯಪುರ ಜಿಲ್ಲೆಯ ಲಾವಣಿಮೇಳಗಣ

5) ಬಿ.ಎಸ್ ಗದ್ದಗಿನಮಠ ; ಜಾನಪದ ಗಿತೆಗಳು

6) ಎಂ.ಎಸ್. ಸುಂಕಾಪುರ (ಸಂ) ; ಜಿವನ ಜೋಕಾಲಿ ಭಾಗ–7

7) ಫಾಲಾಕ್ಷ ; ಕರ್ನಾಟಕು ಇತಿಹಾಸ ಪರಿಚಯ

8) ಬಿ.ಎಸ್.ಗದ್ದಗಿಮಠ ; ಗದ್ದಾಗಿಮಠರ ಬರಹಗಳು

9) ಎಸ್.ಎಂ.ಗಂಗಾಧರಯ್ಯ ;(ಹಾಪ್ರ.ಸಂ)! ಸಾಹಿತ್ಯಸಂಗಯ

10) ತಿಪ್ಪೋಸಾಯಿ.ಪಿ.ಎಸ್.ಬಳ್ಳಾರಿ ಜಿಲ್ಲೆಯ ಜನಪದ ಗೀತಾಸಂಸಾಯಗಳು